ಅವರು ಓದುವುದಕ್ಕೆ ಸಾಧ್ಯವೇ ಆಗದು. ಅಂಕಗಳು ಒಂದು ನೆಪವಷ್ಟೆ; ಮಕ್ಕಳು ಚೆನ್ನಾಗಿ ಓದಬೇಕು; ಓದಿ ಬೆಳೆದು ಸುಖಕರವಾದ ಜೀವನ ನಡೆಸಬೇಕು ಎಂಬ ಹೆತ್ತವರ ಆಶಯವೇ ಮಕ್ಕಳನ್ನು ಅಂಕಗಳ ಆಮಿಷಕ್ಕೆ ಒಡ್ಡುತ್ತದೆ. ಹೀಗೆಯೇ ದುಡಿಮೆಯ ಹಿಂದೆ ಹಣದ ಆಮಿಷವೇ ಕಂಡುಬಂದರೂ ಆಲೋಚಿಸಿದಾಗ ಅದರ ಹಿಂದೆ ಪ್ರೀತಿ ಎಂಬ ನಂಬಿಕೆ ಕೆಲಸ ಮಾಡುತ್ತಿರುವುದು ಸ್ಪಷ್ಟವಾಗುತ್ತದೆ. ಕುಟುಂಬದ ಮತ್ತು ಆತ್ಮೀಯರ ಪ್ರೀತಿ ದಕ್ಕುತ್ತದೆ ಎಂಬ ನಂಬಿಕೆ ಇಲ್ಲದಿದ್ದರೆ ಯಾರೂ ಹಣಕ್ಕಾಗಿಯಷ್ಟೇ ಬೆವರು ಸುರಿಸಿ ದುಡಿಯುವುದಿಲ್ಲ. ಹಣವೇ ನನ್ನನ್ನು ಕಾಪಾಡುತ್ತದೆ ಎಂದು ಚಿಂತಿಸಿದರೆ ಅಂಥವರ ಬಾಳು ದುರಂತಮಯವಾಗುವುದರಲ್ಲಿ ಸಂದೇಹವಿಲ್ಲ. ಹಣ ಬೇಕಿರುವುದು ನನ್ನವರ ಪೋಷಣೆಗೆ; ನನ್ನನ್ನು ಪ್ರೀತಿಸುತ್ತಿರುವವರ ಪೋಷಣೆಗೆ ಎಂಬ ನಂಬಿಕೆಯೇ ಉದ್ಯೋಗದಲ್ಲಿ ಎಂಥ ಕಷ್ಟಗಳನ್ನೂ ಸವಾಲುಗಳನ್ನೂ ಸ್ವೀಕರಿಸಲು ನಮ್ಮನ್ನು ಸಿದ್ಧಗೊಳಿಸುತ್ತದೆ. ಹೀಗೆ ನಾವು ಮಾಡುವ ಪ್ರತಿಯೊಂದು ಕೆಲಸದ ಹಿಂದೆಯೂ ಮೇಲ್ನೋಟಕ್ಕೆ ಕಾಣುವ 'ಲಾಭ'ಕ್ಕಿಂತ ಹೊರತಾದ ಅಂತರಂಗದ ಶಕ್ತಿಯೂ ಸೊಗಸೂ ಕಾರಣವಾಗಿರುತ್ತದೆ. ಈ ಕಾಣದ ವಿವರವನ್ನೇ ನಂಬಿಕೆ ಎನ್ನಬಹುದು.

ರಾತ್ರಿಯ ಕಗ್ಗತ್ತಲಿನಲ್ಲಿ ರಂಗ ಸ್ಮಶಾನಕ್ಕೆ ಹೋಗಿಬರುತ್ತಾನೋ ಇಲ್ಲವೋ ಎನ್ನುವ ಸಂಶಯ ಅವನ ಗೆಳೆಯರಿಗೆ ಬಂದದ್ದು ಸಹಜವೇ. ಏಕೆಂದರೆ ಅವನು ಸ್ವಭಾವತಃ ಪುಕ್ಕಲ. ಈಗ ಅವನ ಸ್ನೇಹಿತರು ಸವಾಲನ್ನು ಒಡ್ಡಿ, ಆ ಪಂಥದಲ್ಲಿ ಹಣವೂ ಇದ್ದುದರಿಂದ ಅವರಿಗೆ ರಂಗನನ್ನು ಪರೀಕ್ಷಿಸಬೇಕಿತ್ತು. ಏಕೆಂದರೆ ಅವನು ಸ್ಮಶಾನಕ್ಕೆ ಹೋಗದೆಯೇ 'ಹೋಗಿದ್ದೆ' ಎಂದು ಸುಳ್ಳು ಹೇಳಬಹುದಷ್ಟೆ! ಹೀಗಾಗಿ ಅವನನ್ನು ಹಿಂಬಾಲಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಈ ಮರ್ಮ ರಂಗನಿಗೆ ಚೆನ್ನಾಗಿಯೇ ಗೊತ್ತಿತ್ತು. ಆದುದರಿಂದಲೇ ಅವನು ಸ್ಮಶಾನಕ್ಕೆ ಹೋಗಿಬರಲು ಒಪ್ಪಿಕೊಂಡ. ವಾಸ್ತವವಾಗಿ ರಂಗನೊಬ್ಬನೇ ಸ್ಮಶಾನಕ್ಕೆ ಹೋಗುತ್ತಿರುವುದಲ್ಲ, ಅವನ ಜೊತೆಗೆ ಅವನನ್ನು ಹಿಂಬಾಲಿಸುತ್ತಿರುವ ಸ್ನೇಹಿತರೂ ಇದ್ದಾರೆ. ಈ ನಂಬಿಕೆಯ ಮೇಲೆಯೇ ಅವನು ಸ್ಮಶಾನಕ್ಕೆ ತೆರಳಿದ್ದು. ಅವನ ನಂಬಿಕೆಯೂ ಕೈ ಕೊಡಲಿಲ್ಲವೆನ್ನಿ! ರಂಗನ ನಂಬಿಕೆಯೇ ಅವನನ್ನು ಪಂದ್ಯದಲ್ಲಿ ಗೆಲ್ಲಿಸಿತು.

ನಾವು ಪ್ರಜ್ಞಾಪೂರ್ವಕವಾಗಿ ನಂಬುತ್ತೇವೆಯೋ, ನಂಬುವುದಿಲ್ಲವೋ – ಆದರೆ ಇಡಿಯ ಜೀವನವೇ ನಂಬಿಕೆಯ ಅಡಿಪಾಯದ ಮೇಲೇ ನಡೆಯುತ್ತಿರುತ್ತದೆ. ಮರುದಿನದ ವ್ಯವಹಾರಗಳ ಬಗ್ಗೆ ಲೆಕ್ಕಚಾರಗಳನ್ನು ಹಾಕಿಯೇ ರಾತ್ರಿ ಮಲಗುತ್ತೇವೆ, ಅಲ್ಲವೆ? ಬೆಳಗ್ಗೆ ಏಳುತ್ತೇವೆ – ಎಂಬ ನಂಬಿಕೆಯೇ ರಾತ್ರಿಯ ನಮ್ಮ ನೆಮ್ಮದಿಯ ನಿದ್ರೆಗೆ ಮೂಲಕಾರಣವಾಗಿರುತ್ತದೆ. ಈ ನಂಬಿಕೆಯನ್ನು ಕಳೆದುಕೊಂಡರೆ ರಾತ್ರಿಯ ನಿದ್ರೆಗೆ ಅವಕಾಶ ಎಲ್ಲಿದ್ದೀತು? ಬೆಳಗ್ಗೆ ಎದ್ದ ಮೇಲೆ ವಾಕಿಂಗ್‌ಗೆ ಎಂದು ರಸ್ತೆಗೆ ಇಳಿಯುತ್ತೇವೆ; ಕ್ಷೇಮವಾಗಿ ಮನೆಗೆ ಹಿಂದಿರುಗುತ್ತೇವೆ ಎಂಬ ನಂಬಿಕೆಯಿಂದಲೇ ಧೈರ್ಯವಾಗಿ ರಸ್ತೆಯಲ್ಲಿ ನಡೆಯುತ್ತೇವೆ. ದಾರಿಯಲ್ಲಿ ಸಿಕ್ಕ ಹೋಟೆಲ್‌ನಲ್ಲಿ ಕಾಫಿಯನ್ನು ಕುಡಿಯುತ್ತೇವೆ, ತಿಂಡಿಯನ್ನೂ ತಿನ್ನುತ್ತೇವೆ; ಕಾಫಿಯಲ್ಲಾಗಲೀ ತಿಂಡಿಯಲ್ಲಾಗಲೀ ಏನೂ ಬೆರಕೆಯಾಗಿಲ್ಲವೆಂಬ ನಂಬಿಕೆಯಿಂದಲೇ ಹೋಟೆಲ್‌ನ ಖಾದ್ಯಗಳನ್ನು ಚಪ್ಪರಿಸುವುದು. 'ತಂದೆ–ತಾಯಿ ನಮ್ಮನ್ನು ಪೋಷಿಸುತ್ತಾರೆ' ಎಂಬ ನಂಬಿಕೆಯಿಂದಲೇ ಮಕ್ಕಳು ಬೆಳೆಯುತ್ತಿರುತ್ತಾರೆ. 'ಮಕ್ಕಳು ನಮ್ಮನ್ನು ಪೋಷಿಸುತ್ತಾರೆ' ಎಂಬ ನಂಬಿಕೆಯಿಂದಲೇ ಹೆತ್ತವರು ಮಕ್ಕಳ ಮೇಲೆ ತಮ್ಮ ಜೀವನವನ್ನೇ ಧಾರೆ ಎರೆದಿರುತ್ತಾರೆ. ಹೀಗೆ ಜೀವನದುದ್ದಕ್ಕೂ ನಮ್ಮನ್ನು ಕಾಪಾಡುವುದು ನಂಬಿಕೆಯೇ.